†ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರದಲ್ಲಿ ಹೆಚ್ಚಲು ಇಲ್ಲಿಂದಲ್ಲಿಗೆ—ಅಲ್ಲಿಂದಿಲ್ಲಿಗೆ ಓಡಾಡುತ್ತಿದೆ ಎಂದು ನಾನೂ ಸಹಾ ಕೇಳಿದ್ದೇನೆ. ಆದರೆ ಇದನ್ನು ಆದಷ್ಟು ಬೇಗ ಪರಿಹಾರ ಮಾಡಲಾಗುತ್ತದೆ.

ಶ್ರೀ ಎಂ. ಸಿ. ಬನಪ್ಪ.—ಈ ವಿಚಾರದಲ್ಲಿ ಯಾವುವಾದರೊಂದು ಇರಾಖೆಗೆ ಜವಾಬ್ದಾರಿಯನ್ನು ವಹಿಸಿ ತೀರ್ಮಾನ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರವನ್ನು ಆದಷ್ಟು ಬೇಗ ಪರಿಹರಿಸಿಕೊಡಲಾಗುತ್ತದೆಂದು ತಿಳಿಸಿದ್ದೇನೆ.

Harijan Colony at Narasapur Village in Kolar District.

*Q.—274. Sri P. VENKATAGIRIAPPA (Kolar).—

Will the Government be pleased to state :—

(*a*) when the Harijan Colony of Narasapur Village in Kolar District was sanctioned and the amount sanctioned for the construction of houses in the colony ;

(*b*) the number of houses completed and the number of houses yet to be completed ;

(*c*) the steps taken by them to complete the incomplete houses in the above colony ?

A.—Smt. YASHODHARA DASAPPA (Minister for Social Welfare).—

(*a*) In the year 1947-48.

The following amounts were sanctioned from time to time :

1. Rs. 45,000 in 1948-49
2. Rs. 44,800 in 1951-52
3. Rs. 12, 00 in 1959-60
4. Rs. 4,000 in 1960-61

(*b*) 58 houses were completed and 42 houses are yet to be completed.

(*c*) The matter is reeeving attention of the Government.

ಶ್ರೀ ಪಿ. ವೆ ಕಟಗಿರಿಯಪ್ಪ.—ಈ ಕೆಲಸ 1947-48 ರಲ್ಲೇ ಪ್ರಾರಂಭವಾಯಿತು. ಆಗ ಇದಕ್ಕೆ ಯಾರು ಅಡಿಪಾಯವನ್ನು ಹಾಕಿದವರು ?

†ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿ ಯಾರು ಅಡಿಪಾಯ ಹಾಕಿದರು ಎಂಬುದು ಗೊತ್ತಿಲ್ಲ. ಇದು ಯಾವಾಗ ಪ್ರಾರಂಭವಾಯಿತು ಎಂದು ಕೇಳಿದ್ದಕ್ಕೆ ಉತ್ತರವನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇದರ ಅಡಿಪಾಯವನ್ನು ಶ್ರೀ ಕೆ. ಸಿ. ರೆಡ್ಡಿಯವರು ಹಾಕಿದರೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

Mr. SPEAKER.—The Member is giving information rather than elicit it.

---

†Indicates that the remarks or speeches have not been revised by the member concerned

ಶ್ರೀಮತಿ ಯಶೋಧರ ದಾಸಪ್ಪ.—ಅವರೇ ಅದನ್ನು ಹಾಕಿರಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಶ್ರೀ ಚೆಂಗಲರಾಯರೆಡ್ಡಿಯವರು ಇದಕ್ಕೆ ಅಡಿಪಾಯ ಹಾಕಿದ್ದಾರೆ, ಈ ಕೆಲಸವನ್ನು ಬೇಗ ಮುಗಿಸಬಾರದು ಎಂಬ ಒಂದು ಕಾರಣವನ್ನು ಬಿಟ್ಟರೆ ಈ ಕೆಲಸ ಇಷ್ಟು ನಿಧಾನವಾಗುವುದಕ್ಕೆ ಬೇರೇನು ಕಾರಣಗಳಿವೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಆ ಗ್ರಾಮದಲ್ಲಿ ಮೊದಲು ಅಲ್ಲಿ 100 ಮನೆಗಳಿದ್ದವು. ಅಲ್ಲಿ ಅವುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿತ್ತು. ಆಗ ಆ ಮನೆಗಳನ್ನು ಕಟ್ಟಿಸತಕ್ಕ ಕೆಲಸ ಪ್ರಾರಂಭವಾಯಿತು. ಅಲ್ಲಿ ಕೆಲವು ಜನಗಳಿಗೆ ಸಹಾಯ ಮಾಡಬೇಕೆಂದು ಕೋರಲಾಗಿತ್ತು. ಅನಂತರ ಅಲ್ಲಿ ಆ ಕೆಲಸವನ್ನು ಮುಂದುವರಿಸಲು ಒಬ್ಬ ಕಂಟ್ರಾಕ್ಟರನ್ನೂ ನೇಮಿಸಿಕೊಳ್ಳಲಾಗಿತ್ತು. ಸರ್ಕಾರದವರೂ ಸಹಾ 50 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿದ್ದರು. ಆದರೆ ಸರ್ಕಾರದವರು ಒಂದು ಸಾವಿರದವರೆಗೆ ಖರ್ಚು ಮಾಡಿದಾಗ್ಲೂ ಅಲ್ಲಿರತಕ್ಕ ಜನಗಳಿಂದ ಒಂದು ಕಾಸೂ ಬರಲಿಲ್ಲ. ಹೀಗಾಗಿ ಸರ್ಕಾರದವರ ಹಣವಲ್ಲಿ 49 ಸಾವಿರ ಹಾಗೇ ಉಳಿಯಿತು. ಹೀಗಾಗಿ ಅಲ್ಲಿ ಮೊದಲು ಕಂಟ್ರಾಕ್ಟರು ಕಟ್ಟಿದ್ದ ಮನೆಗಳೂ ಬಿದ್ದು ಹೋದವು. ಅದೆಲ್ಲವನ್ನೂ ಈಗ ಪುನರ್ ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಕೆ. ಲಕ್ಕಪ್ಪ.—40 ಹರಿಜನರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರಕ್ಕೆ 18 ವರ್ಷ ಬೇಕೇ, ಇದು ಸರ್ಕಾರದವರ ನೀತಿಯೇ ?

Mr. SPEAKER.—It is an observation rather than eliciting information.

ಶ್ರೀ ಪಿ. ವೆಂಕಟಗಿರಿಯಪ್ಪ.—ಆ ಹರಿಜನರ ಮನೆಗಳು ರಾಜಮಾರ್ಗದಲ್ಲಿವೆ. ಅವುಗಳನ್ನು ಕಿತ್ತು ಲಕ್ಷಣವಾಗಿ ಕಟ್ಟಿಸಿ ಕೊಡುತ್ತೇವೆಂದು ಹೇಳಿ, ಇದ್ದ ಮನೆಗಳನ್ನು ಕೆಡವಿ ಆ ಜನರನ್ನು ಬರದ ಕೆಳಗೆ ಇರುವಂತೆ ಮಾಡಿ ಇಲ್ಲಿಗೆ 18 ವರ್ಷಗಳಿಂದಲೂ ಅವರಿಗೆ ಮನೆಗಳನ್ನು ಕಟ್ಟಿಸಲು ಸಾಧ್ಯವಾಗದಿರುವುದು ಈ ಇಲಾಖೆಯ ದೌರ್ಬಲ್ಯತೆಯನ್ನು ತೋರಿಸುತ್ತಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು. ಈ ಕೆಲಸವನ್ನು ಕೈಗೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದ್ದರೂ ಸ್ಥಳದಲ್ಲಿರತಕ್ಕ ಜನರು ಮುಂದುವರಿಯುತ್ತಿಲ್ಲ. ಹಾಗೆ ಅವರು ಕೆಲಸಮಾಡದಿರುವುದರಿಂದ ನಿಧಾನವಾಗಿದೆ. ಕಂಟ್ರಾಕ್ಟರ ಕೆಲಸದಲ್ಲಿ ಬೇರೆ ರೂಪವಾಗಿದೆ. ಹೀಗೆ ಇದಕ್ಕೆ ನಾನಾ ಕಾರಣಗಳಿವೆ. ಅಲ್ಲಿ ಮನೆಗಳನ್ನು ಕಟ್ಟಿಸಬೇಕೆಂಬ ವೇಳೆಗೆ ತಮಗೆಲ್ಲರಿಗೂ ಗೊತ್ತಿರುವಂತೆ ಈ ಹೌಸಿಂಗ್ ಸ್ಕೀಂ ಬೇರೆ ನಿಂತುಹೋಯಿತು. ಆದರೆ ಈಗ ಉಳಿದಿರತಕ್ಕ ಮನೆಗಳನ್ನು ಕಟ್ಟಿಸಲು ಅದಕ್ಕೆ ಸಂಬಂಧಪಟ್ಟ ಫೈಲು ಹಣಕಾಸಿನ ಇಲಾಖೆಯಲ್ಲಿ ಪರಿಶೀಲನೆ ಆಗುತ್ತಿದೆ. ಅದನ್ನು ಆದಷ್ಟು ಬೇಗ ಕೈಗೊಳ್ಳಲಾಗುವುದು.

ಶ್ರೀ ಕೆ. ಲಕ್ಕಪ್ಪ.—18 ವರ್ಷಗಳಾದರೂ ಆ 42 ಮನೆಗಳನ್ನು ಕಟ್ಟಿನವೇ ಇರುವುದನ್ನು ನೋಡಿದರೆ ಸರ್ಕಾರದವರು ಹರಿಜನರ ಉದ್ಧಾರದ ನೀತಿಯನ್ನು ಕೈಬಿಟ್ಟಿಂತಾಗಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ತಮಗೆಲ್ಲರಿಗೂ ಗೊತ್ತಿರುವಂತೆ ಮೂರನೇ ಪ್ಲಾನಿನಲ್ಲಿ ಇದಕ್ಕೆ ಹಣವನ್ನು ಒದಗಿಸಿರಲಿಲ್ಲ. ಆದಾಗ್ಯೂ ಸರ್ಕಾರದವರು ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ಒದಗಿಸಿ ಕೆಲಸ ಮುಂದುವರಿಸತಕ್ಕ ಕಾಲದಲ್ಲಿ ಜನರೇ ಮುಂದೆ ಬರಲಿಲ್ಲ. ಆದ್ದರಿಂದ ಸರ್ಕಾರದವರು ತಮ್ಮ ನೀತಿಯನ್ನು ಎಂದೂ ಬದಲಾಯಿಸಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇದನ್ನು ಯಾವಾಗ ಮುಗಿಸುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಆದಷ್ಟು ಬೇಗ ಕೆಲಸವನ್ನು ಪ್ರಾರಂಭಮಾಡಲಾಗುವುದು.

Scheme for the amelioration of the backward classes in Channarayapatna Taluk.

*Q.—321. Sri H. R. KESHAVA MURTHY (Gandasi).—

Will the Government be pleased to state :—

(a) whether they have sanctioned any scheme for the amelioration of the backward classes in Channarayapatna Taluk, Hassan District;